ಕಥೆ

# ಮಣಿಮೇಕಲೆ



ಜಿ.ವಿ.ಆನಂದಮೂರ್ತಿ

ಕಲೆ: ಎಸ್. ವಿ. ಹೂಗಾರ್

ಚೈತ್ರ ಪೂರ್ಣಿಮೆ. ಮಧುರೆಯಲ್ಲಿ ಅಂದು ಸಂತೆಯ ದಿನ. ಸುತ್ತಮುತ್ತಲ ಹಳ್ಳಿಯವರೆಲ್ಲಾ ಅಂದು ಸಂತೆಗೆ ಬಂದುಹೋಗಿದ್ದರು. ಸೂರ್ಯ ಮುಳುಗಿದ ಮೇಲೆ ಸಂತೆ ಬರಕಸ್ತಾಗಿತ್ತು. ಎಲ್ಲರೂ ತಮ್ಮ ತಮ್ಮ ರಖಾವುಗಳನ್ನು ಮಾರಿಕೊಂಡು ಮನೆಗಳಿಗೆ ತೆರಳಿದ್ದರು. ಶಾತ್ತನಾರ್ ಕೂಡ ಅಂದು ಸಂತೆಯ ವ್ಯಾಪಾರ ಮುಗಿಸಿ ಅಂಗಡಿ ಮುಚ್ಚಿ ಬರುವಷ್ಟರಲ್ಲಿ ನಡುರಾತ್ರಿಯಾಗಿತ್ತು. ಕಪ್ಪಾಗಿದ್ದ ಆಕಾಶದ ನಡುವೆ ನಕ್ಷತ್ರಗಳೆಲ್ಲಾ ಅರೆಗಣ್ಣಾಗಿದ್ದವು. ಭೂಮಿಯ ಕೈಗೆ ಎಟಕುವಂತೆ ಅತಿ ಸಮೀಪದಲ್ಲಿದ್ದ ಹೊನ್ನ ಬಣ್ಣದ ಚಂದಿರ ಹೊಳೆಯುತ್ತಿದ್ದ. ಭೂಮಿಯ ಮೇಲೆಲ್ಲಾ ತಿಂಗಳ ಬೆಳಕು ಮಂದವಾಗಿ ಚೆಲ್ಲಿತ್ತು. ಮಲಗಿದ್ದರೂ ನಿದ್ದೆ ಬಾರದೆ ಶಾತ್ತನಾರ್ ತಮ್ಮ ಮನೆಯ ಕಿಟಕಿ ಬಳಿಯೇ ತೇಲುತ್ತಿದ್ದ ಬೆತ್ತಲು ಚಂದಿರನನ್ನು ಹಾಗೆಯೇ ದಿಟ್ಟಿಸಿ

